

ಡಾ.ವಿನೋದ ಛೆಬ್ಬಿ

**ಕಣ್ತೆರೆದು ಸಂಗಾತಿಯೊಡನೆ ಪ್ರತಿಕ್ರಿಯಿಸುತ್ತಿದ್ದರೆ ಕಾಮಕೂಟದ ಸಂತೃಪ್ತಿ ಹೇಗಿರುತ್ತದೆ?**

# 311: ಹೊಸ ದಾರಿ - 51

ಪ್ರತಿಫಲಿತ ಸ್ವಂತಿಕೆ, ನಿಜಸ್ವಂತಿಕೆ, ಮನೋನಕ್ಷೆ, ಮನೋಮಿಲನದ ಕ್ಷಣಗಳು ಎಂದು ಏನೇನೋ ಮಾತಾಡುತ್ತಿದ್ದೇವೆ. ಈ ಸಿದ್ಧಾಂತದ ದುರ್ಬೀನಿನ ಮೂಲಕ ಕೌಟುಂಬಿಕ ಆಗುಹೋಗುಗಳನ್ನು ಪ್ರತ್ಯಕ್ಷವಾಗಿ ಕಾಣೋಣ.

ಶಶಿ–ಭೂಷಣರಿಗೆ ಐದು ವರ್ಷದ ಮಗನಿದ್ದಾನೆ. ಅಪ್ಪ ಅವನನ್ನು ಸದಾ ಹದ್ದುಬಸ್ತಿನಲ್ಲಿಡಲು ನೋಡುತ್ತಾನೆ. ಅನಗತ್ಯ ಒತ್ತಾಯ ಹೇರುತ್ತ, ಮಗ ಮನಸ್ಸಿಲ್ಲದೆ ಪಾಲಿಸುವಾಗ ಭೂಷಣ ತನ್ನ ಬೆನ್ನು ಚಪ್ಪರಿಸಿಕೊಳ್ಳುತ್ತ ಇರುತ್ತಾನೆ.

ಶಶಿಯು ಭೂಷಣನನ್ನು ಪ್ರಶ್ನಿಸಿದ್ದನ್ನು ಹೋದಸಲ ತಿಳಿಸಿದ್ದೆ. ಆನಂತರ ಇನ್ನೊಂದು ರಾತ್ರಿ ಭೂಷಣ ಕೂಟಕ್ಕೆ ಕೈಹಾಕಿದ. ಶಶಿ ಮನಸ್ಸಿಲ್ಲದಿದ್ದರೂ ಸಹಕರಿಸಿದಳು. ನಂತರ ಯಥಾಪ್ರಕಾರ ಭೂಷಣ ಅತೃಪ್ತಿಯಿಂದ ತುಚ್ಛೀಕರಿಸುವುದು, ಶಶಿ ತಪ್ಪಿತಸ್ಥಳಂತೆ ಹಿಂಜರಿಯುವುದು ನಡೆಯಿತು. ಮರುದಿನ ಭೂಷಣ ಮಗನಮೇಲೆ ರೇಗುವುದನ್ನೂ, ಪುಟ್ಟ ಸಪ್ಪೆಯಾಗುವುದನ್ನೂ ನೋಡಿ ಶಶಿಗೆ ಥಟ್ಟನೆ ಅರಿವಾಯಿತು: ಈ ಮನುಷ್ಯನನ್ನು ಯಾವತ್ತೂ ಮೆಚ್ಚಿಸಲು ಸಾಧ್ಯವಿಲ್ಲ! ಹೀಗಿದ್ದರೆ ಅಳಿದುಳಿದ ಆತ್ಮಗೌರವವನ್ನೂ ಕಳೆದುಕೊಳ್ಳುವುದು ನಿಶ್ಚಿತವಾಯಿತು. ಏನೋ ನಿರ್ಧರಿಸಿ, ಭೂಷಣನೊಡನೆ ಪ್ರತ್ಯೇಕವಾಗಿ ಮಾತಾಡಿದಳು. 'ನೀವು ಕೇಳಿದಾಗಲೆಲ್ಲ ಸೆಕ್ಸ್ ಕೊಟ್ಟು ಕೀಳಾಗುವುದು ಸಾಕಾಗಿದೆ. ಇನ್ನುಮೇಲೆ ನಿಮ್ಮಿಂದ ಯಾವ ಟೀಕೆಯನ್ನು ಕೇಳಲು ತಯಾರಿಲ್ಲ. ಬೇರೆಯವರಿಗೆ ಮರ್ಯಾದೆ ಕೊಡುವುದನ್ನು ಕಲಿತುಕೊಳ್ಳಿ. ಅಂದರೆ ಪುಟ್ಟನಿಗೂ ಆತ್ಮಾಭಿಮಾನ ಬರುತ್ತದೆ!'

ಭೂಷಣನ ಪಿತ್ತ ನೆತ್ತಿಗೇರಿತು. 'ಎಷ್ಟು ಧೈರ್ಯ ನಿನಗೆ?' ಎಂದು ಅಬ್ಬರಿಸಿದ. ಶಶಿ ದೃಢನಿಶ್ಚಯದಿಂದ ಹೇಳಿದಳು: 'ನಾನು ನಿನಗೆ ಹಿಡಿಸುವುದಿಲ್ಲ, ನನಗೆ ನಾನೇ ಹಿಡಿಸುವುದಿಲ್ಲ. ಅದಕ್ಕೆಂದೇ ನಿನ್ನಸಿಟ್ಟು ತಣಿಸಲು ನನ್ನ ಮೈ ಕೊಡುತ್ತೇನೆ. ತಪ್ಪಿಲ್ಲದಿದ್ದರೂ ಕ್ಷಮಾಪಣೆ ಕೇಳಿಕೊಳ್ಳುತ್ತ ಇರುತ್ತೇನೆ. ಹೀಗಿದ್ದರೆ ನನಗೂ ನಿನಗೂ ಸುಖವಿಲ್ಲ. ನಮ್ಮ ಜಗಳದಿಂದ ಪುಟ್ಟನಿಗೂ ಸುಖವಿಲ್ಲ. ನೀನು ಮಗನನ್ನು ಯಾಕೆ ಬಯ್ಯುವುದು ಗೊತ್ತಾ? ಅವನು ನಿನಗೆಲ್ಲಿ ಮರ್ಯಾದೆ ಕೊಡುವುದಿಲ್ಲವೋ ಎನ್ನುವ ಅಳುಕು ನಿನಗೆ. ನಾನಂತೂ ನಿನಗೆ ಮರ್ಯಾದೆ ಕೊಡಲಿಕ್ಕೆ ಆಗ್ತಿಲ್ಲ. ಯಾಕೆಂದರೆ ನನ್ನಲ್ಲೇ ಮರ್ಯಾದೆ ಉಳಿದಿಲ್ಲ. ನನಗೀಗ ಏನು ಅನಿಸುತ್ತದೆ ಗೊತ್ತಾ? ನಾನಿಷ್ಟೊಂದು ಅನಾಕರ್ಷಕಳು, ನಿಷ್ಪ್ರಯೋಜಕಳು, ಕಾಮಾಸಕ್ತಿ ಇಲ್ಲದವಳು ಅನಿಸಿಬಿಟ್ಟಿದೆ. ನನಗೆ ಮರ್ಯಾದೆ ಸಿಗುತ್ತದೆ ಎಂದು ಅನಿಸುವ ತನಕ ಸೆಕ್ಸ್ ಬೇಡವೇಬೇಡ'. ಎಂದು ಪಟಪಟನೇ ಮಾತಾಡಿದಳು.

ಒಬ್ಬರಿಗೊಬ್ಬರು ತೆರೆದುಕೊಂಡು ಸೃಷ್ಟಿಯಾದ ಮನೋಮಿಲನದ ಕ್ಷಣಗಳಲ್ಲಿ ಭೂಷಣ ಶಶಿಯನ್ನು ಸ್ಪಷ್ಟವಾಗಿ ಕಂಡುಕೊಂಡ: ಅವಳ ಸ್ವರದಲ್ಲಿ ಎಂದಿನಂಥ ಕೀರಲು, ನಡುಕ, ಪಶ್ಚಾತ್ತಾಪವಿಲ್ಲ, ಇಲ್ಲ. ಹೆದರಿಕೆಯೊಡನೆ ದೃಢಸಂಕಲ್ಪವಿದೆ. ಅಷ್ಟಲ್ಲದೇ ಏಕವಚನ ಉಪಯೋಗಿಸುತ್ತಿದ್ದಾಳೆ. ಇದೆಲ್ಲ ಅವನನ್ನು ಅಧೀರರನ್ನಾಗಿ ಮಾಡಿತು. ಆಮೇಲೆ ಉತ್ತರಿಸುತ್ತೇನೆಂದು ಜಾರಿಕೊಂಡ.

ನಂತರ ನಾಲ್ಕುದಿನ ಭೂಷಣ ತನ್ನದೇ ಪ್ರಪಂಚದಲ್ಲಿ ಮುಳುಗಿದ್ದ. ಶಶಿ ಅವನನ್ನು ಅವನ ಪಾಡಿಗೆ ಬಿಟ್ಟುಬಿಟ್ಟಿದ್ದಳು. ಐದನೇ ದಿನ ಭೂಷಣ ಬಾಯಿಬಿಟ್ಟ. ಗಂಭೀರವಾದ ಇಳಿದನಿಯಲ್ಲಿ ಮಾತಾಡಿದ. ಇವಳ ಅವಮರ್ಯಾದೆ ಏನೆಂದು ಯೋಚಿಸಿದ್ದ. ನನ್ನಮೇಲೆ ನನಗೆ ನಂಬಿಕೆ ಬರಲು ನಿನ್ನ ಅಗತ್ಯವಿತ್ತು, ನಿನ್ನ ಸಹಾಯದಿಂದ ನಾನು ಗಟ್ಟಿಯಾಗಬೇಕು ಎಂದಿತ್ತು. ಅದರೆ ಪರಿಣಾಮ ಹೀಗಾಗುತ್ತದೆ ಎಂದು ಗೊತ್ತಿರಲಿಲ್ಲ ಎಂದ. ಮುಂದೇನೂ ಹೇಳಲಾಗದೆ ಕೆಳಮುಖದಿಂದ ಸುಮಾರು ಹೊತ್ತು ಕುಳಿತಿದ್ದ. ನಂತರ ನಿರ್ವಿಣ್ಣ ನಗೆಬೀರಿ ಗುಡ್‌ನೈಟ್ ಹೇಳಿದ.

ಮರುದಿನ ಮೂವರೂ ಊಟ ಮಾಡುವಾಗ ಮಗ ಸಾಂಬಾರಿನಲ್ಲಿದ್ದ ಹೋಳುಗಳನ್ನೂ ಕರಿಬೇವನ್ನೂ ಹೆಕ್ಕಿ ಪಕ್ಕಕ್ಕಿಟ್ಟ. ಹೀಗೆ ಮಾಡಿದಾಗಲೆಲ್ಲ ಅಪ್ಪ ಮಗನ ತಲೆಯ ಮೇಲೆ ಕುಟ್ಟಿ, ತಿನ್ನು ಎಂದು ಸನ್ನೆ ಮಾಡುತ್ತಿದ್ದ. ಆದಿನ ಬೇಡದ ರಾಶಿಯನ್ನು ಪಕ್ಕಕ್ಕೆ ಜರುಗಿಸುವಾಗ ನೀರಿನ ಲೋಟ ಉರುಳಿ ತಟ್ಟೆಯಲ್ಲಿ ನೆರೆಹಾವಳಿ ಆಯಿತು. ಮಗ ಗಾಬರಿಯಾಗಿ ಅಪ್ಪನನ್ನು ದಿಟ್ಟಿಸುತ್ತ ಏಟುತಿನ್ನಲು ಮೈಸೆಟೆಸಿದ.

ಕೆಲವು ದಿನಗಳಿಂದ ಆತ್ಮವಿಶ್ಲೇಷಣೆಯಲ್ಲಿದ್ದ ಭೂಷಣನಿಗೆ ಮಗ ತನ್ನ ಮನೋನಕ್ಷೆಯನ್ನು ಓದಿದ್ದು ಗೊತ್ತಾಯಿತು. ಶಶಿ ಹೇಳಿದ್ದು ಸರಿ; ನಾನು ಕಾಮಕೂಟದ ಮೂಲಕ ಹೆಂಡತಿಯನ್ನು, ಬಲವಂತದ ಮೂಲಕ ಮಗನನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ನೋಡುತ್ತಿದ್ದೇನೆ. ಅವರ ಮೇಲಿನ ನಿಯಂತ್ರಣ ತಪ್ಪಿದರೆ ನನ್ನ ಮೇಲಿನ ನಿಯಂತ್ರಣ ತಪ್ಪುತ್ತದೆ! ಆ ಕ್ಷಣದಲ್ಲಿ ಶಶಿಯನ್ನು ದಿಟ್ಟಿಸಿದ. ಕಣ್ಣುಕಣ್ಣು ಕೂಡುವಾಗ ಮನೋಮಿಲನವಾಯಿತು. ಆ ತೀಕ್ಷ್ಣವಾದ, ಹಿಂದೆಮುಂದೆ ಸರಿಯದ ವರ್ತಮಾನದ ಕ್ಷಣಗಳಲ್ಲಿ ಮೂವರ ಮನೋನಕ್ಷೆಗಳು ಏಕವಾಗಿ ಎಲ್ಲವೂ ಬಯಲಾಯಿತು. ಅವನೊಳಗೆಲ್ಲೋ ಸ್ವಾವಲಂಬನೆಯ ಸೆಲೆ ಹುಟ್ಟಿತು. ಹೇಗಾದರೂ ಸರಿ, ತನ್ನನ್ನೇ ತಾನು ನಂಬಬೇಕೆನಿಸಿತು. ಮಗನ ತಟ್ಟೆಯ ನೀರಲ್ಲಿ ಮುಳುಗಿದ್ದ ಕರಿಬೇವು, ತರಕಾರಿಯ ಹೋಳನ್ನು ತನ್ನ ತಟ್ಟೆಗೆ ಎತ್ತಿಹಾಕಿಕೊಂಡು ತಿನ್ನಲು ಶುರುಮಾಡಿದ. 'ನಿನಗಿಷ್ಟ ಇಲ್ಲವಾದರೆ ನನ್ನ ಅದೃಷ್ಟ!' ಎಂದು ನಸುನಕ್ಕ. ಏಟು ನಿರೀಕ್ಷಿಸಿ ಸನ್ನದ್ಧನಾಗಿ ಸೆಟೆದುಕುಳಿತ ಮಗ ಗೊಂದಲಗೊಂಡ. ಹೀಗೆ ತನ್ನ ಭಾವನೆಗಳನ್ನು ಮುಂದುಮಾಡುವ ಬದಲು ಭೂಷಣ ತನ್ನ ಮನೋನಕ್ಷೆಯನ್ನು ಮಗನಿಗೆ ಓದಲು ಕೊಟ್ಟ. ಅದನ್ನು ಓದಿದವನಿಗೆ ಅಪ್ಪ ತನ್ನನ್ನು ಅವಮಾನಿಸುತ್ತಿಲ್ಲ ಎಂದು ಅರಿವಾಗಿ, ತನ್ನಿಂದಾಗಿದ್ದು ಅವಹೇಳನಕರವಲ್ಲ, ಪೆದ್ದುತನವಷ್ಟೇ ಎಂದೆನಿಸಿತು.

ಮುಂದಿನ ದಿನಗಳಲ್ಲಿ ಭೂಷಣನ ವರ್ತನೆ ರೂಪಾಂತರಗೊಂಡಿತ್ತು. ಮಗನ ಹಲವಾರು 'ತಪ್ಪು'ಗಳಿಗೂ ಅಧಿಕಾರ ಚಲಾಯಿಸಲಿಲ್ಲ. ಪರಿಣಾಮವಾಗಿ ಮಗನ ಉದ್ಧಟತನ ಕಡಿಮೆಯಾಯಿತು. ತಂದೆಮಕ್ಕಳ ಹೊಸ ಸಮೀಕರಣದಿಂದ ಶಶಿ ಪ್ರಭಾವಿತಳಾದಳು. ಆತ್ಮವಿಶ್ಲೇಷಣೆಯಲ್ಲಿ ತೊಡಗಿಸಿಕೊಂಡ ಭೂಷಣನ ಬಗೆಗೆ ಗೌರವ ಹೆಚ್ಚಿತು. ಭೂಷಣನ ದುರ್ಬಲತೆಯ ಅನಿಸಿಕೆ, ತನ್ನ ಸಬಲೀಕರಣಕ್ಕಾಗಿ ಇನ್ನೊಬ್ಬರನ್ನು ಒತ್ತಾಯಿಸುವ ಸಣ್ಣತನ ಮಾಯವಾಗಿತ್ತು. ಇದರಿಂದ ಶಶಿ ಭೂಷಣನನ್ನು ಕಾಮಿಸಲು ಶುರುಮಾಡಿದಳು.

ತನ್ನ ಬದಲುನಕ್ಷೆಯನ್ನು ಇಷ್ಟಪಡುವ ಶಶಿಯನ್ನು ಕಂಡು ಭೂಷಣನಲ್ಲಿ ಕೂಟವಿಲ್ಲದೆ ಸಂತೃಪ್ತಿ ಹುಟ್ಟಲು ಆರಂಭಿಸಿತು – ಇದನ್ನೇ ಕೂಟದಿಂದ ಬಯಸುತ್ತಿದ್ದುದು ನಿಚ್ಚಳವಾಯಿತು. ಅದಲ್ಲದೆ ತನ್ನ ಬದಲುವರ್ತನೆಯು ಮಗನ ಮೇಲೆ ಪ್ರಭಾವ ಬೀರಿದ್ದನ್ನು ನೆನಪಿಸಿಕೊಂಡು ಒಳಗೊಳಗೇ ಖುಷಿಪಟ್ಟ. ಮಗನಿಂದ ಮರ್ಯಾದೆ ಬರದಿರುವುದರ ಬಗೆಗೆ ತಲೆಕೆಡಿಸಿಕೊಳ್ಳಲಿಲ್ಲ.

ಕೆಲವು ದಿನಗಳ ನಂತರ ಕಾಮಕೂಟ ನಡೆಯಿತು. ಇಲ್ಲಿ ಕ್ರಿಯೆಗಿಂತ ಅವರ ಮನಸ್ಸುಗಳು ನಡೆಸಿದ್ದ ತಯಾರಿ ಮುಖ್ಯವಾಗುತ್ತದೆ. ಈ ಕೂಟವು ಇಬ್ಬರಿಗೂ ಬೇರೆಬೇರೆ ಅರ್ಥವನ್ನೇ ಕೊಡುವಂತಿತ್ತು. ಶಶಿಯು ಭೂಷಣನನ್ನು ಪ್ರಸನ್ನಗೊಳಿಸಲು ಧಡಪಡಿಸಲಿಲ್ಲ. ಅವಳಿಂದ ಬಂದಿದ್ದರಲ್ಲಿ ತಪ್ಪು ಹುಡುಕಲು ಭೂಷಣನೂ ಒದ್ದಾಡಲಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ, ಅವರು ತಮ್ಮನ್ನೇ ಕೇಂದ್ರೀಕರಿಸಿದರು. ಮೊಟ್ಟಮೊದಲ ಸಲ ಕಾಮಕೂಟವು ಇಬ್ಬರಿಗೂ ಚೈತನ್ಯದಾಯಕವಾಗಿ ಕಂಡಿತು. ಇಬ್ಬರೂ ಮನೋಮಿಲನದ ಕ್ಷಣಗಳಲ್ಲಿ ನಡೆಯುವುದನ್ನು ವರ್ತಮಾನದಲ್ಲಿದ್ದು ಅನುಭವಿಸಿದರು. ಬಚ್ಚಿಡುವುದೇನೂ ಉಳಿದಿಲ್ಲವಾದುದರಿಂದ ತಾನೇತಾನಾಗಿ ವಿಜೃಂಭಿಸಿದರು. ಪರಸ್ಪರರನ್ನು ನೋಡುತ್ತ ಸುಮಾರು ಹೊತ್ತು ಇದ್ದವರು ಕಣ್ತೆರೆದುಕೊಂಡೇ ಕೂಟ ನಡೆಸಿದರು. ತನ್ನಷ್ಟಕ್ಕೆ ತೆರೆದುಕೊಂಡ ಸಂಗಾತಿಯನ್ನು ಓದುವುದೇ ಅನಿರ್ವಚನೀಯವಾಗಿತ್ತು. ಒಂದು ಮಾತೂ ನಡೆಯಲಿಲ್ಲ. ಹೀಗೆ ವ್ಯಕ್ತಿ ಪ್ರತ್ಯೇಕತೆಯನ್ನೂ ಜೋಡಿತನವನ್ನೂ ಒಟ್ಟೊಟ್ಟಿಗೆ ಮೇಳೈಸಿದರು.

ಈ ಪ್ರಸಂಗವು ಅವರ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ಆದರೆ ಆಶಾದಾಯಕ, ಅದ್ಭುತ ಆರಂಭವೊಂದು ಕಾಲಿಟ್ಟಿತ್ತು.

ಸಂಪರ್ಕಕ್ಕೆ: 8494933888; Email: vinod.chebbi@gmail.com